ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೆ, ವಿಶ್ವವಿದ್ಯಾನಿಲಯದಲ್ಲಿ ಹರಿಜನ, ಗಿರಿಜನರ ಪೈಕಿ ಅತ್ಯಂತ ಹೆಚ್ಚು ಅಂಕವನ್ನು ತೆಗೆದುಕೊಂಡವರಿಗೆ ನೇರವಾಗಿ ನೇಮಕಾತಿ ಮಾಡಬೇಕು ಎಂದು ಇದೆ. ಆ ರೀತಿ ನೇರ ನೇಮಕಾತಿ ಕೋರಿ ಎಷ್ಟು ಅರ್ಜಿಗಳು ಬಂದಿದೆ? ಎಷ್ಟು ಜನರಿಗೆ ನೇಮಕಾತಿ ಮಾಡಿದ್ದೀರಿ? ಇನ್ನು ಎಷ್ಟು ಬಾಕಿ ಇದೆ ಎಂದು ಕೇಳಿದ್ದೆ. ಅದರಲ್ಲಿ ಕೇವಲ 80 ಜನರಿಗೆ ಸೌಲಭ್ಯ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಇನ್ನು ಎಷ್ಟು ಜನರಿಗೆ ಕೊಡಬೇಕು? ಅವರಿಗೆ ಇದುವರೆಗೆ ಏಕೆ ಕೊಡಲು ಆಗಿಲ್ಲ ಎಂಬ ಬಗ್ಗೆ ಮಾಹಿತಿ ಕೊಡಬೇಕು. ನೇರ ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಸರ್ಕಾರವೇ ಕಾನೂನು ಮಾಡಿದೆ. ಆ ರೀತಿ ಮಾಡಿ ಸರ್ಕಾರ ನೇರ ನೇಮಕಾತಿ ಮಾಡಿಕೊಳ್ಳದಿದ್ದರೆ ಮತ್ತೆ ಯಾರು ಮಾಡುತ್ತಾರೆ? ಆದ್ದರಿಂದ ಆ ಕಾನೂನನ್ನು ಜಾರಿಗೆ ತರುವ ವ್ಯವಸ್ಥೆಯನ್ನು ಮಾನ್ಯ ಮುಖ್ಯಮಂತ್ರಿಯವರು ಮಾಡಬೇಕು. ಆ ಕಾನೂನನ್ನು ಮತ್ತೆ ಪರಿಶೀಲನೆ ಮಾಡಬೇಕು ಎಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, 1985ರ ಸ್ಪೆಶಲ್ ರೆಕ್ರೂಟ್‌ಮೆಂಟ್ ಡ್ರೈವ್‌ನ ಪ್ರಕಾರ ವಿಶ್ವವಿದ್ಯಾನಿಲಯಗಳಲ್ಲಿ ಮೊದಲನೆ ಮೂರು ಸ್ಥಾನವನ್ನು ಗಳಿಸಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿಶೇಷವಾಗಿ ನೇರ ನೇಮಕಾತಿ ಮಾಡಬೇಕು ಎಂದು ಸರ್ಕಾರದ ಆದೇಶ ಇದೆ. ಆದರೆ ಅದರಲ್ಲಿ ಕೆಲವು ಕ್ವಾಲಿಫೈಯಿಂಗ್ ಕ್ಲಾಸಸ್‌ಗಳಿದೆ. ಅದೇನೆಂದರೆ, There should be shortfall in the representation of the persons belonging to SC/ST in the special group A, B posts. Shortfall should be existing on the date of recruitment. Vacancies should be available. These are the three conditions imposed, in-built in that Government order as far as recruitment is concerned.

ಲೋಕಾಯುಕ್ತ ಇಲಾಖೆಯ ದಾಳಿ

104 - ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1-1-1994 ರಿಂದ 1-2-2000ದ ಇಸವಿಯವರೆಗೆ ರಾಜ್ಯದಲ್ಲಿ ಲೋಕಾಯುಕ್ತ ಇಲಾಖೆ ರಾಜ್ಯದ ಎಷ್ಟು ಅಧಿಕಾರಿಗಳ ಮನೆಗಳ ಮೇಲೆ ದಾಳಿ ನಡೆಸಿದೆ?

ಆ) ದಾಳಿ ನಡೆಸಲಾದ ಅಧಿಕಾರಿಗಳ ಹೆಸರು, ದೊರಕಿದ ಆಸ್ತಿಯ ಪ್ರಮಾಣ ಹಾಗೂ ಅವರ ಮೇಲೆ ಕೈಗೊಂಡಿರುವ ಕ್ರಮಗಳ ವಿವರವನ್ನು ನೀಡುವುದು?

ಶ್ರೀ ಎಸ್. ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಮತ್ತು ಆ) 103. (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ).

ಅನುಬಂಧ

ಕ್ರ.ಸಂ.	ಹೆಸರು	ಆಸ್ತಿಯ ಪ್ರಮಾಣ	ತನಿಖೆ ಹಂತ
1	2	3	4
ಶ್ರೀಮತಿ : ಶ್ರೀಯುತರುಗಳಾದ			
1.	ಎಂ. ವೆಂಕಟೇಶ್, ಮುಖ್ಯ ಅಭಿಯಂತರರು, ಬಿ.ಎಂ.ಪಿ. ಬೆಂಗಳೂರು	ರೂ. 25,21,162-00	'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.
2.	ಎಸ್.ಬಿ. ಸನ್ನೀರ್, ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.	ರೂ. 24,57,158-00	ತನಿಖಾ ಹಂತದಲ್ಲಿದೆ.
3.	ಕೆ.ಎಸ್. ಶ್ರೀವತ್ಸ, ಜನರಲ್ ಮ್ಯಾನೇಜರ್ ಕೆಎಸ್ಐಎಂಸಿ, ಬೆಂಗಳೂರು.	ರೂ. 12,75,049-00	ತನಿಖಾ ಹಂತದಲ್ಲಿದೆ.
4.	ಎಂ.ರುದ್ರದೇವ್, ಡೆಪ್ಯುಟಿ ಜನರಲ್ ಮ್ಯಾನೇಜರ್, ಕೆಎಸ್ಐಡಿಸಿ, ಬೆಂಗಳೂರು	ರೂ. 21,50,000-00	'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.
5.	ಜ್ಯೋತಿಲಿಂಗಮ್, ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಮೈಸೂರು	ರೂ. 24,60,000-00	'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.
6.	ಜೆ.ಎಸ್. ವೆಂಕಟೇಶ್, ಚೀಫ್ ಮ್ಯಾನೇಜರ್, ಕೆಎಸ್.ಐಡಿಸಿ, ಬೆಂಗಳೂರು	ರೂ. 17,43,711-00	ತನಿಖಾ ಹಂತದಲ್ಲಿದೆ.
7.	ಎಂ. ಮಹೇಶನ್, ಐ.ಎ.ಎಸ್, ಕಮೀಷನರ್ ಆಫ್ ಟೆಕ್ಸ್ಟೈಲ್ಸ್, ಬೆಂಗಳೂರು	ರೂ. 51,95,000-00	-"-

1	2	3	4
8.	ಹೆಚ್. ಅಂಜನಪ್ಪ ಅಸಿಸ್ಟೆಂಟ್ ಕಮೀಷನರ್ ಆಫ್ ಕಮರ್ಶಿಯಲ್ ಟಾಕ್ಸಸ್, ಗುಲ್ಬರ್ಗಾ	ರೂ. 16,27,121-00	ಪೆಂಡಿಂಗ್ ಟ್ರೈಲ್.
9.	ಬಿ. ಜಯಣ್ಣ, ಗ್ರಾಮಲೆಕ್ಕಿಗರು, ಸಾನೆಗುರುವನಹಳ್ಳಿ, ಬೆಂಗಳೂರು	ರೂ. 34,33,000-00	'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.
10.	ಎಸ್. ಚಂದ್ರಶೇಖರಯ್ಯ, ಗ್ರಾಮ ಲೆಕ್ಕಿಗರು ಕೋರಮಂಗಲ, ಬೆಂಗಳೂರು.	ರೂ. 21,00,000-00	-"-
11.	ಕೆ.ವಿ. ನಾಗೇಶ್, ಅಡ್ಮಿನ್ ಆಫೀಸರ್ ಕೆಎಸ್ಎಎಂ. ಬೋರ್ಡ್	ರೂ. 14,00,000-00	ನ್ಯಾಯಾಲಯದಲ್ಲಿ ಬಾಕಿ ಇದೆ.
12.	ಎನ್.ಎನ್. ನೆಹರು, ಜಂಟಿ ನಿಬಂಧಕರು ಸಹಕಾರ ಸಂಘಗಳ ಇಲಾಖೆ, ರೇಷ್ಮೆ ಇಲಾಖೆ, ಬೆಂಗಳೂರು	ರೂ. 13,10,000-00	-``-
13.	ಡಿ. ಗಂಗಾಧರಯ್ಯ, ಹೆಚ್ಚುವರಿ ನಿರ್ದೇಶಕರು, ರೇಷ್ಮೆ ಇಲಾಖೆ, ಬೆಂಗಳೂರು	ರೂ. 10,00-000	-"-
14.	ಎಂ.ಕೃಷ್ಣ, ಕೆಎಎಸ್, ಪ್ರಾಜೆಕ್ಟ್ ಆಫೀಸರ್, ಚಿಕ್ಕಬಳ್ಳಾಪುರ	ರೂ. 52,17,000-00	ತನಿಖಾ ಹಂತದಲ್ಲಿದೆ.
15.	ಎಂ. ಈರಯ್ಯ, ಅಡಿಷನಲ್ ಡೈರೆಕ್ಟರ್ ಕಾಮರ್ಸ್ ಮತ್ತು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್, ಬೆಂಗಳೂರು.	ರೂ. 16,33,000-00	'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ
16.	ಕೆ.ಎಂ. ವಿಶ್ವೇಶರಯ್ಯ ಡೆಪ್ಯೂಟಿ ಕಮೀಷನರ್ ಆಫ್ ಕರ್ಮಷಿಯಲ್ ಟಾಕ್ಸಸ್, ಬೆಂಗಳೂರು.	ರೂ. 5,96,394-00	-``-

1	2	3	4
17.	ಎಸ್. ಸುದರ್ಶನ್, ಸೂಪರಿಂಟೆಂಡೆಂಟ್ ಇಂಜಿನಿಯರ್, ಬಿ.ಎಂ.ಪಿ. ಬೆಂಗಳೂರು	ರೂ. 60,00,000-00	ತನಿಖಾ ಹಂತದಲ್ಲಿದೆ.
18.	ಸಿ. ರಂಗಸ್ವಾಮಯ್ಯ ವರ್ಕ್ ಇನ್ಸ್‌ಪೆಕ್ಟರ್, ಬಿ.ಎಂ.ಪಿ., ಬೆಂಗಳೂರು	ರೂ. 37,29,418-00	-"-
19.	ಟಿ.ಸಿ. ನಾಗರಾಜ, ಸಬ್ ರಿಜಿಸ್ಟ್ರಾರ್, ಎಫ್.ಐ.ಆರ್ ಬಳ್ಳಾರಿ. ರೈಡ್	ರೂ. 20,00,000-00 ರೂ. 4,32,953-00	-"- -"-
20.	ಬಿ.ಎಂ. ಮುನಿಯಪ್ಪ ಎಕ್ಸಿಕ್ಯುಟೀವ್ ಇಂಜಿನೀಯರ್, ಬಿ.ಎಂ.ಪಿ., ಬೆಂಗಳೂರು	ರೂ. 50,00,000-00	-``-
21.	ಡಾ. ವಿ.ಬಿ. ಚೌಡಯ್ಯ, ಜಂಟಿ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಗುಲ್ಬರ್ಗಾ	ರೂ. 26,12,288-00	-"-
22.	ಪಿ.ಬಿ. ರಾಮಮೂರ್ತಿ, ಐಎಎಸ್, ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬೆಂಗಳೂರು	ರೂ. 82,44,146-00	-``-
23.	ಎಂ.ಆರ್. ಮಹೇಶ್ವರನ್ ಎಸಿಪಿ, ಅಲಸೂರು, ಬೆಂಗಳೂರು.	ರೂ. 36,30,000-00	-"-
24.	ಸಿ. ಚನ್ನಯ್ಯ, ಆರ್.ಟಿ.ಓ ಇಂದಿರಾನಗರ, ಬೆಂಗಳೂರು.	ರೂ. 76,00,000-00	-"-
25.	ಎಂ.ವಿ. ವೀರಭದ್ರಯ್ಯ, ಕೆಎಎಸ್, ಡೆಪ್ಯುಟಿ ಕಮೀಷನರ್ (ಆಡಳಿತ), ಬಿ.ಎಂ.ಪಿ. ಬೆಂಗಳೂರು.	ರೂ. 1,20,50,000-00	-"-

1	2	3	4
26.	ಡಾ. ಹೆಚ್. ನಾರಾಯಣ, ನಿರ್ದೇಶಕರು, ಮದರ್ ಡೈರಿ, ಯಲಹಂಕ, ಬೆಂಗಳೂರು	ರೂ. 1,15,98,605-00	-``-
27.	ಸಿ. ಸೋಮಶೇಖರ್ ಕೆಎಎಸ್, ಮ್ಯಾನೇಜಿಂಗ್ ಡೈರೆಕ್ಟರ್, ದೇವರಾಜ ಅರಸ್ ಟ್ರಕ್ ಟರ್‌ಮಿನಲ್ಸ್ ಲಿಮಿಟೆಡ್	ರೂ. 1,20,96,000-00	-"-
28.	ಶ್ರೀರಾಮರೆಡ್ಡಿ, ರೆವಿನ್ಯೂ ಇನ್ಸ್‌ಪೆಕ್ಟರ್ ವರ್ತೂರ್ ಸರ್ಕಲ್ ಬೆಂಗಳೂರು.	ರೂ. 1,25,00,000-00	-``-
29.	ಐ.ಆರ್. ಪೆರುಮಾಳ್, ಐಎಎಸ್, ಮ್ಯಾನೇಜಿಂಗ್ ಡೈರೆಕ್ಟರ್, ಎಸ್.ಸಿ:ಎಸ್.ಟಿ, ಡೆವಲಪ್‌ಮೆಂಟ್, ಕಾರ್ಪೋರೇಷನ್, ಬೆಂಗಳೂರು	ರೂ. 1,44,22,000-00	ತನಿಖಾ ಹಂತದಲ್ಲಿದೆ.
30.	ಹೆಚ್.ಪಿ. ಈರಪ್ಪ, ಡೆಪ್ಯೂಟಿ ಕಮೀಷನರ್, ಆಫ್ ಎಕ್ಸೈಸ್, ಮೈಸೂರು	ರೂ. 2,25,76,725-00	-"-
31.	ಹೆಚ್. ನಾಗೇಂದ್ರಪ್ಪ, ಎಕ್ಸಿಕ್ಯುಟೀವ್ ಇಂಜಿನಿಯರ್, ಶಾಂತಿನಗರ ಡಿವಿಜನ್, ಬಿ.ಎಂ.ಪಿ., ಬೆಂಗಳೂರು.	ರೂ. 80,00,000-00	-"-
32.	ಎ. ಪುಟ್ಟರಾಜಯ್ಯ, ಅಸಿಸ್ಟೆಂಟ್ ರೆವಿನ್ಯೂ ಆಫೀಸರ್, ಚಾಮರಾಜಪೇಟೆ, ಬಿ.ಎಂ.ಪಿ., ಬೆಂಗಳೂರು	ರೂ. 39,75,690-00	-"-
33.	ಸಿ. ಅಂದಾನಿ, ರೆವಿನ್ಯೂ ಆಫೀಸರ್, ನಾರ್ತ್ ಈಸ್ಟ್ ಜೋನ್ ಬಿ.ಎಂ.ಪಿ., ಬೆಂಗಳೂರು	ರೂ. 97,23,068-00	-"-

1	2	3	4
34.	ಡಿ. ಕೃಷ್ಣಪ್ಪ, ಸಬ್-ರಿಜಿಸ್ಟ್ರಾರ್, ಜಯನಗರ, ಬೆಂಗಳೂರು	ರೂ. 67,31,795-00	-"-
35.	ಹೆಚ್. ನಿಂಗಯ್ಯ, ಎಕ್ಸ್-ಪ್ರೆಸಿಡೆಂಟ್, ಜಿಲ್ಲಾ ಪರಿಷತ್, ತುಮಕೂರು.	ರೂ. 5,40,411-00	-``-
36.	ಎ. ಮುನಿಯಪ್ಪ ಅಸಿಸ್ಟೆಂಟ್ ಡೈರೆಕ್ಟರ್, ಟೌನ್ ಪ್ಲಾನಿಂಗ್, ಬಿಡಿಎ., ಬೆಂಗಳೂರು.	ರೂ. 21,94,,363-00	-"-
37.	ಎಸ್. ಹನುಮಂತಪ್ಪ, ಎಸ್.ಎಲ್.ಎ.ಓ., ತುಮಕೂರು	ರೂ. 9,39,722-00	-``-
38.	ಎ.ಇ. ಮುದ್ದವೀರಪ್ಪ, ಪಿಎಸ್ಐ (ಟ್ರಾಫಿಕ್), ತುಮಕೂರು.	ರೂ. 9,15,780-00	-"-
39.	ಬಿ.ಎನ್. ಮಹದೇವಯ್ಯ, ರೆಸಿಡೆಂಟ್ ಇಂಜಿನಿಯರ್, ಕೆಎಸ್ಸಿಸಿ, ಮೈಸೂರು.	ರೂ. 7,05,325-00	-``-
40.	ಆರ್.ಪಿ. ರಾಮಯ್ಯ, ಅಸಿಸ್ಟೆಂಟ್ ಡೈರಕ್ಟರ್ ಆಫ್ ಅಗ್ರಿಕಲ್ಚರ್, ಪಾವಗಡ.	ರೂ. 4,73,985-00	-"-
41.	ಎಂ. ಆಂಜನಪ್ಪ, ಆರ್ಎಫ್ಓ, ಅನೇಕಲ್ ತಾಲ್ಲೂಕು, ಬೆಂಗಳೂರು.	ರೂ. 10,41,265-00	-``-
42.	ಸಿ. ಕೃಷ್ಣಪ್ಪ, ಸ್ಟೋರ್ ಕೀಪರ್, ಹೇಮಾವತಿ ಪ್ರಾಜೆಕ್ಟ್, ಗುಬ್ಬಿ.	ರೂ. 13,62,525-00	-"-

1	2	3	4
43.	ಕೆ.ಜಿ. ರಾಮಪ್ಪ, ಹಿರಿಯ ಸಹಾಯಕರು, ಆಹಾರ ಸರಬರಾಜು ಇಲಾಖೆ, ತುಮಕೂರು	ರೂ. 9,52,285-00	-"-
44.	ಕೆ.ವಿ. ರಾಮಕೃಷ್ಣಪ್ಪ, ಜೆ.ಇ, ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಚಿಕ್ಕಬಳ್ಳಾಪುರ.	ರೂ. 30,08,210-00	-"-
45.	ಶಿವಸ್ವಾಮಿ ಅಬಕಾರಿ, ಇನ್ಸ್‌ಪೆಕ್ಟರ್ ತಿಪಟೂರು, ಸಬ್-ಡಿವಿಜನ್, ತುಮಕೂರು	ರೂ. 29,33,738-00	-"-
46.	ಆರ್. ಗಂಗಯ್ಯ ಗ್ರಾಮಲೆಕ್ಕಿಗರು, ಚಿಕ್ಕಬಾಣಾವರ, ಬೆಂಗಳೂರು	ರೂ. 63,22,000-00	-"-
47.	ಆರ್. ರಾಜಣ್ಣ ಜಂಟಿ ಆಯುಕ್ತರು, ಅಬಕಾರಿ ಇಲಾಖೆ,	ರೂ. 1,66,22,685-00	-"-
48.	ಕೆ.ಸಿ. ರಾಜಶೇಖರಪ್ಪ, ಎ.ಇ., ಬಿ.ಡಿ.ಎ. ಬೆಂಗಳೂರು	ರೂ. 1,47,26,300-00	-"-
49.	ಡಿ. ರಂಗನಾಥ್, ಪೊಲೀಸ್ ಇನ್ಸ್‌ಪೆಕ್ಟರ್ ಟ್ರಾಫಿಕ್ ಪೀಣ್ಯ, ಬೆಂಗಳೂರು	ರೂ. 21,58,155-00	-"-
50.	ದೀಪಕ್ ಕುಮಾರ್, ಮಾತೂರ್ ಮೈಸೂರು ಲ್ಯಾಂಪ್ಸ್	ರೂ. 1,01,13,634-00	-"-
ಗುಲ್ಬರ್ಗಾ ವಿಭಾಗ			
51.	ಎಸ್.ಕೆ. ಅಬ್ದುಲ್ಲಾ ಆರ್.ಎಫ್.ಓ., ಗುಲ್ಬರ್ಗಾ.	ರೂ. 62,224-00	ನ್ಯಾಯಾಲಯದಲ್ಲಿ ಬಾಕಿ ಇದೆ.
52.	ಕೆ. ತಿಮ್ಮಪ್ಪ ಆರ್.ಐಎ. ಸಿ.ಎಂ.ಸಿ., ರಾಯಚೂರು.	ರೂ. 14,25,000-00	'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.

1	2	3	4
53.	ಬಿ.ಎಸ್. ಆಲೂರು, ಸ್ಟೋರ್ ಕೀಪರ್ ಕೆ.ಇ.ಬಿ. ಗುಲ್ಬರ್ಗಾ	ರೂ. 5,82,535-00	ನ್ಯಾಯಾಲಯದಲ್ಲಿ ಬಾಕಿ ಇದೆ.
54.	ಅಶೋಕ್ ದುಂಡವ್ವ ಕಾಂಬ್ಳಿ, ಸಿ.ಡಿ.ಪಿ.ಓ. ಶಹಪೂರ್ ರಾಯಚೂರು ಜಿಲ್ಲೆ.	ರೂ. 3,83,672-00	ತನಿಖೆಯ ಹಂತದಲ್ಲಿದೆ.
55.	ಎಸ್.ಎಸ್. ಕೃಷ್ಣಪ್ಪ, ಹಣಕಾಸು ನಿಯಂತ್ರಕರು, ರಾಯಚೂರು ಥರ್ಮಲ್ ಪವರ್ ಸ್ಟೇಷನ್, ಕೆ.ಇ,ಬಿ., ಶಕ್ತಿನಗರ, ರಾಯಚೂರು	ರೂ. 11,65,517-00	ತನಿಖೆಯ ಹಂತದಲ್ಲಿದೆ.
56.	ದೊಡ್ಡಣ್ಣಗೌಡ, ಮಾರ್ಕೆಟಿಂಗ್ ಸೂಪರ್‌ವೈಸರ್ ಎ.ಪಿ.ಎಂ.ಸಿ. ಬಳ್ಳಾರಿ	ರೂ. 1,29,346-00	'ಬಿ' ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.
57.	ಹೆಚ್.ಎಸ್. ಗೋಟ್ಲಾ, ಅಬಕಾರಿ ನಿರೀಕ್ಷಕರು, ಸೇಡಮ್ ಮತ್ತು ಇವರ ಪತ್ನಿ ದೀನಾಜ್ ಹೆಚ್. ಗೋಟ್ಲಾ, ಹೆಡ್ ಮಿಸ್ಟ್ರೆಸ್, ಪ್ರಜ್ಞಾ ಇಂಗ್ಲೀಷ್ ಮೀಡಿಯಮ್ ಪ್ರೈಮರಿ ಸ್ಕೂಲ್, ಗುಲ್ಬರ್ಗಾ	ರೂ. 47.10,529-00	ತನಿಖೆಯ ಹಂತದಲ್ಲಿದೆ.
ಬೆಳಗಾಂ ವಿಭಾಗ			
58.	ಸಿ.ಜಿ. ಪೂಜಾರ್ ಎಸ್.ಇ. ಪಿ.ಡಬ್ಲ್ಯೂಡಿ ಸರ್ಕಲ್ ಬೆಳಗಾಂ.	ರೂ. 41,16,616-00	ತನಿಖೆಯ ಹಂತದಲ್ಲಿದೆ.
59.	ಬಿ.ಜಿ. ಮಲಿಗೇರ್ .ಸಿ.ಇ, ಓ ಮತ್ತು ಎಂ ಪಿಡಬ್ಲ್ಯೂಡಿ, ಧಾರವಾಡ	ರೂ. 20,96,223-00	ತನಿಖೆಯ ಹಂತದಲ್ಲಿದೆ.

1	2	3	4
60.	ಕೆ.ಎಲ್. ಅಜರೆಡ್ಡಿ, ಇ.ಇ., ಪಿಡಬ್ಲ್ಯೂಡಿ, ರಾಣೆಬೆನ್ನೂರು ಹಾವೇರಿ ಜಿಲ್ಲೆ.	ರೂ. 25,85,256-00	ತನಿಖೆಯ ಹಂತದಲ್ಲಿದೆ.
61.	ಬಿ.ಡಿ. ಸಕ್ರಿ, ಇ.ಇ., ಕೆ.ಇ.ಬಿ., ಬಾಗಲಕೋಟೆ	ರೂ. 41,31,737-00	ನ್ಯಾಯಾಲಯದಿಂದ ವಿಶೇಷ ಪ್ರಕರಣದ ಸಂಖ್ಯೆ ಬರಬೇಕಾಗಿದೆ.
62.	ಐ.ಬಿ. ಅವಾಟಿ, ಎ.ಆರ್.ಟಿ.ಓ. ಚಿಕ್ಕೋಡಿ, ಬೆಳಗಾಂ ಜಿಲ್ಲೆ	ರೂ. 8,07,009-00	ತನಿಖೆಯ ಹಂತದಲ್ಲಿದೆ.
63.	ಎಂ.ಬಿ. ಕಟ್ಟಗಾಲ್‌ಕರ್, ಸ್ಪೋರ್ ಕೀಪರ್ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ನ್ಯಾಷನಲ್ ಹೈವೆ, ಬೆಳಗಾಂ.	ರೂ. 56,05, 972	ಅಭಿಯೋಜನೆ ಮಂಜೂರಾತಿ ಆದೇಶವು ಸಕ್ಷಮ ಪ್ರಾಧಿಕಾರದಿಂದ ಬರಬೇಕಾಗಿದೆ.
64.	ಎ.ಡಿ. ತಿನ್‌ಮಾಕರ್ ಸಿ. ಗದಗ್ ವೃತ್ತ	ರೂ. 21,79,539	ತನಿಖೆಯ ಹಂತದಲ್ಲಿದೆ.
65.	ಎಸ್.ಬಿ. ಕೋಜ, ಉಪ ಅಬಕಾರಿ ಅಧೀಕ್ಷಕರು, ಬೆಳಗಾಂ	ರೂ. 81,83, 881	-ಡಿಟೋ-
66.	ಪಿ.ಬಿ. ಲಕ್ಷ್ಮೇಶ್ವರ್, ಜೂನಿಯರ್ ಇಂಜಿನಿಯರ್, ಕಾರ್ಪೊರೇಷನ್ ಹುಬ್ಬಳ್ಳಿ	ರೂ. 78,69,277	-ಡಿಟೋ-
67.	ಎಸ್.ವೈ. ಮಾಸ್‌ಮಟ್ಟಿ, ವ್ಯವಸ್ಥಾಪದ ನಿರ್ದೇಶಕರು ಬೆಳಗಾಂ ಕೋ-ಅಪರೇಟಿವ್ ಮಿಲ್ ಲಿಮಿಟೆಡ್, ಬೆಳಗಾಂ ಜಿಲ್ಲೆ.	ರೂ. 40,17,624	-ಡಿಟೋ-
68.	ಜಿ.ಎಸ್. ನಾಗಸೂರ್, ಎ.ಇ.ಇ., ಜಿಲ್ಲಾ ಪಂಚಾಯತ್ ಸಬ್ ಡಿವಿಜನ್, ಬಸವನ ಬಾಗೇವಾಡಿ, ಬಿಜಾಪುರ ಜಿಲ್ಲೆ.	ರೂ. 60,59,673	-ಡಿಟೋ-

1	2	3		4
69.	ಹೆಚ್.ಎಸ್. ಮನೂರ್, ಡಿ.ಡಿ.ಪಿ.ಐ. ಬಿಜಾಪುರ	ರೂ.	50,30,655	-ಡಿಟೋ-
70.	ಯು.ಡಿ. ಕಡಮ್ ಕಂದಾಯ ನಿರೀಕ್ಷಕರು ಬೆಳಗಾಂ	ರೂ.	32,41,700	-ಡಿಟೋ-
71.	ಎಂ.ಎಸ್.ಈಟಿ ಇ.ಇ., ಯು.ಕೆ.ಪಿ. ನಾರಾಯಣಪುರ, ಬಾಗಲಕೋಟೆ ಜಿಲ್ಲೆ	ರೂ.	1,00,53,531	-ಡಿಟೋ-
72.	ಸಿ.ಎಸ್. ಅಂದಾನಿ, ಅಧೀಕ್ಷಕ ಅಭಿಯಂತರರು, ನ್ಯಾಷನಲ್ ಹೈವೆ ವೃತ್ತ, ಧಾರವಾಡ	ರೂ.	1,50,78,546	-ಡಿಟೋ-
73.	ಟಿ.ಬಿ. ಪಾಟೀಲ್ ಅಸಿಸ್ಟೆಂಟ್ ಕರ್ಮಷಿಯಲ್ ಆಫ್ ಟ್ಯಾಕ್ಸ್, ಕುಮಟ, ಉತ್ತರ ಕನ್ನಡ ಜಿಲ್ಲೆ	ರೂ.	1,17,03,968	-ಡಿಟೋ-
ಮಂಗಳೂರು ವಿಭಾಗ				
74.	ಪಿ.ಎ. ವಿಜಯನ್, ಪಿ.ಎಸ್.ಐ. ಎಕ್ಸೈಸ್, ಬಂಟವಾಳ	ರೂ.	6,63,431	ಚಾರ್ಜ್ ಶೀಟ್ ಸಲ್ಲಿಸಬೇಕಾಗಿದೆ.
75.	ಎಂ.ಎಸ್. ಶೇಖರಪ್ಪ ಅಸಿಸ್ಟೆಂಟ್ ಡೈರೆಕ್ಟರ್ ಲ್ಯಾಂಡ್ ಆರ್ಮಿ	ರೂ.	9,80,344	ತನಿಖೆಯ ಹಂತದಲ್ಲಿದೆ.
76.	ಸಿ.ಬಿ. ನಾಯಕ್, ಅಗ್ರಿಕಲ್ಚರಲ್ ಅಸಿಸ್ಟೆಂಟ್, ಜೋಯಿಡಾ,	ರೂ.	10,47,303	ತನಿಖೆಯ ಹಂತದಲ್ಲಿದೆ.
77.	ಬಿ.ಎಂ. ರಾಜೀವ್ (ಡಿ.ಸಿ.ಎಫ್) ಡಿವಿಷನಲ್ ಮ್ಯಾನೇಜರ್, ಕೆ.ಎಫ್.ಡಿ.ಸಿ. ಚಿಕ್ಕಮಗಳೂರು.	ರೂ.	16,43,715	-ಡಿಟೋ-
78.	ಕೆ.ವೈ. ತುರಾಯಿ, ಸಿ.ಪಿ.ಐ. ಸಿರಸಿ ಪೋಲೀಸ್ ಠಾಣೆ.	ರೂ.	33,80,910	-ಡಿಟೋ-
79.	ಎಂ.ಆರ್. ಸುರೇಶ್‌ಕುಮಾರ್, ಸೀನಿಯರ್ ಐ.ಎಂ.ವಿ. ಆರ್.ಟಿ.ಓ. ಸಿರಸಿ	ರೂ.	43,10,010	-ಡಿಟೋ-

1	2	3		4
80.	ಎಂ.ಎ. ಜಯಕುಮಾರ್, ಸಿ.ಪಿ.ಐ. ತರೀಕೆರೆ ಪೋಲೀಸ್ ಠಾಣೆ.	ರೂ.	37,22,2000	-ಡಿಟೋ-
ಮೈಸೂರು ವಿಭಾಗ				
81.	ಟಿ. ಚನ್ನಕೇಶಪ್ಪ, ಎಕ್ಸಿಕ್ಯೂಟೀವ್ ಇಂಜಿನಿಯರ್, ಮೈಸೂರು ಸಿಟಿ ಕಾರ್ಪೋರೇಷನ್, ಮೈಸೂರು	ರೂ.	9,00,799	ಅಮಾನತ್ತಿಗೆ ಶಿಫಾರಸ್ಸು ಮಾಡಲಾಗಿದೆ. ನ್ಯಾಯಾಲಯದಲ್ಲಿ ದೋಷರೋಪಣೆ ಪಟ್ಟಿ ಸಲ್ಲಿಸಲಾಗಿದೆ.
82.	ಗುರುಮಲ್ಲಪ್ಪ ಕಾರ್ಯದರ್ಶಿಗಳು ಉದುಬೂರು ಮಂಡಲ ಪಂಚಾಯಿತಿ ಮೈಸೂರು	ರೂ.	2,47,900	ಸದರಿ ನೌಕರರನ್ನು ದಿ. 30.3.94 ರಿಂದ ಅಮಾನತ್ತಿನಲ್ಲಿಡಲಾಗಿದೆ. ನ್ಯಾಯಾಲಯದಲ್ಲಿ ದೋಷಾರೋಪಣೆ ಪಟ್ಟಿ ಸಲ್ಲಿಸಲಾಗಿದೆ.
83.	ರಂಗಪ್ಪ, ಎ.ಇ.ಇ. ನಂ.8, ಉಪ ವಿಭಾಗ, ಶ್ರವಣಬೆಳಗೊಳ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ.	ರೂ.	3,28,520	ಅಮಾನತ್ತಿಗೆ ಶಿಫಾರಸ್ಸು ಮಾಡಲಾಗಿದೆ. ನ್ಯಾಯಾಲಯದಲ್ಲಿ ದೋಷರೋಪಣೆ ಪಟ್ಟಿ ಸಲ್ಲಿಸಲಾಗಿದೆ.
84.	ರಮೇಶ್, ಜ್ಯೂನಿಯರ್ ಇಂಜಿನಿಯರ್ ಮೈಸೂರು ಸಿಟಿ ಕಾರ್ಪೋರೇಷನ್ ಮೈಸೂರು.	ರೂ.	1,45,213	ಅಮಾನತ್ತಿಗೆ ಶಿಫಾರಸ್ಸು ಮಾಡಲಾಗಿದೆ. ಅಭಿಯೋಜನಾ ಮಂಜೂರಾತಿ ಪತ್ರಿಕ್ಕಾಗಿ ಶಿಫಾರಸ್ಸು ಮಾಡಲಾಗಿದೆ.
85.	ಟಿ. ಜಯರಾಮ ಸಹಾಯಕ ಕಾರ್ಯಪಾಲರ, ಅಭಿಯಂತರರು, ಜಿಲ್ಲಾಪರಿಷತ್ ಇಂಜಿನಿಯರಿಂಗ್ ಉಪ ವಿಭಾಗ ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.	ರೂ.	23,36,760	ಅಮಾನತ್ತಿಗೆ ಶಿಫಾರಸ್ಸು ಮಾಡಲಾಗಿದೆ. ನ್ಯಾಯಾಲಯದಲ್ಲಿ ಸದರಿ ನೌಕರರ ವಿರುದ್ಧ ದೋಷಾರೋಪಣೆ ಪಟ್ಟಿ ಸಲ್ಲಿಸಲಾಗಿದೆ.

1	2	3	4
86.	ಎನ್.ಆರ್. ಸುಬ್ರಮಣ್ಯ. ಸಹಾಯಕ ಕೃಷಿ ಅಧಿಕಾರಿಗಳು, ಡ್ರೈ ಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್, ಸೋಮವಾರ ಪೇಟೆ, ಕೊಡಗು ಜಿಲ್ಲೆ.	ರೂ. 7,16,371	ಅಮಾನತ್ತಿಗೆ ಶಿಫಾರಸ್ಸು ಮಾಡಲಾಗಿದೆ. ದಿನಾಂಕ 20-4-96ರಂದು ಸದರಿ ನೌಕರರು ಅಮಾನತ್ತುಗೊಂಡಿರುತ್ತಾರೆ. ಅಭಿಯೋಜನಾ ಮಂಜೂರಾತಿ ಪತ್ರಿಕ್ಕಾಗಿ ಸಕ್ಷಮ ಪ್ರಾಧಿಕಾರಕ್ಕೆ ಪತ್ರ ಬರೆಯಲಾಗಿದೆ.
87.	ಎಂ.ಪೂಜಾರ್. ಕನ್ಸರ್‌ವೇಷನ್ ಅಸಿಸ್ಟೆಂಟ್, ಅಕಾಲಜಿ ಇಲಾಖೆ, ಮೈಸೂರು.	ರೂ. 24,57, 625	ಸದರಿ ನೌಕರರನ್ನು ದಿ. 14-11-1995 ರಂದು ಅಮಾನತ್ತು ಗೊಂಡಿರುತ್ತಾರೆ. ನ್ಯಾಯಾಲಯದಲ್ಲಿ ಬಾಕಿ ಇದೆ.
88.	ಎ. ರಾಜೀವ್ ಅರಕ್ಷಕ ಉಪನಿರೀಕ್ಷಕರು, ಕುಶಾಲನಗರ ಕೊಡಗು ಜಿಲ್ಲೆ.	ರೂ. 1,34,631	ನ್ಯಾಯಾಲಯದಲ್ಲಿ ದೋಷಾರೋಪಣೆ ಪಟ್ಟಿ ಸಲ್ಲಿಸಲಾಗಿದೆ. ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿರುತ್ತದೆ.
89.	ತಾಜ್‌ಪಾಷ ಜೂನಿಯರ್ ಇಂಜಿನಿಯರ್ ಕೆ.ಇ.ಬಿ. ನರಸಿಂಹರಾಜ ಉಪ ವಿಭಾಗ, ಮೈಸೂರು	ರೂ. 17,18,760	ಸದರಿ ನೌಕರರು ದಿ. 15-6-96 ರಿಂದ ಅಮಾನತ್ತು ಗೊಂಡಿರುತ್ತಾರೆ. ಸದರಿ ನೌಕರರ ವಿರುದ್ಧ ನ್ಯಾಯಾಲಯದಲ್ಲಿ ದೋಷಾರೋಪಣೆ ಪಟ್ಟಿ ಸಲ್ಲಿಸಲಾಗಿದೆ.
90.	ಟಿ. ದುರ್ಗಪ್ಪ, ಕಾರ್ಯಪಾಲಕ ಅಭಿಯಂತರರು, ಹಾರಂಗಿ ನಾಲೆ, ಕೆ.ಆರ್. ನಗರ, ತಾಲ್ಲೂಕು, ಮೈಸೂರು.	ರೂ. 4,51,999	ಅಮಾನತ್ತಿಗೆ ಶಿಫಾರಸ್ಸು ಮಾಡಲಾಗಿದೆ. ಅಂತಿಮ ವರದಿಯು ಮುಖ್ಯ ಕಛೇರಿಯಲ್ಲಿ ಪರಿಶೀಲನೆಯಲ್ಲಿದೆ.

1	2	3	4
91.	ಮಹದೇವಮೂರ್ತಿ, ಬಿ.ಡಿ.ಓ. ಟಿ. ನರಸೀಪುರ ತಾಲ್ಲೂಕು ಮೈಸೂರು ಜಿಲ್ಲೆ.	ರೂ. 13,99,543	ಅಮಾನತ್ತಿಗೆ ಶಿಫಾರಸ್ಸು ಮಾಡಲಾಗಿದೆ. ಅಂತಿಮ ವರದಿಯು ಮುಖ್ಯ ಕಛೇರಿಯಲಿ ಪರಿಶೀಲನೆಯಲ್ಲಿದೆ.
92.	ಜಿ.ಟಿ. ಗೌಡ ಕಾರ್ಯದರ್ಶಿಗಳು ಸಿದ್ದಲಿಂಗಪುರ ಮಂಡಲ ಪಂಚಾಯಿತಿ ಮೈಸೂರು ತಾಲ್ಲೂಕು ಮತ್ತು ಜಿಲ್ಲೆ.	ರೂ. 11,91,143	ಅಮಾನತ್ತಿಗೆ ಶಿಫಾರಸ್ಸು ಮಾಡಲಾಗಿದೆ. ಅಂತಿಮ ವರದಿಯು ಮುಖ್ಯ ಕಛೇರಿಯಲ್ಲಿ ಪರಿಶೀಲನೆಯಲ್ಲಿದೆ.
93.	ಕೆ.ಎಸ್. ಮಹದೇವಯ್ಯ, ಸಬ್ ರಿಜಿಸ್ಟ್ರಾರ್ ರಾಮನಗರ ತಾಲ್ಲೂಕು, ಬೆಂಗಳೂರು ಗ್ರಾ. ಜಿಲ್ಲೆ.	ರೂ. 10,60,000	ಅಮಾನತ್ತಿಗೆ ಶಿಫಾರಸ್ಸು ಮಾಡಲಾಗಿದೆ. ತನಿಖಾ ಹಂತದಲ್ಲಿರುತ್ತದೆ.
94.	ಎಂ. ಮಾಳಯ್ಯ ಅಬಕಾರಿ ನಿರೀಕ್ಷಕರು ಅಬಕಾರಿ ಜಾಗೃತ ದಳ, ಮೈಸೂರು.	ರೂ. 9,50,000	-ಡಿಟೋ-
95.	ಕೆ. ಚಿಕ್ಕವೀರಯ್ಯ. ಹಿರಿಯ ಅಭಿಯಂತರರು, ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಉಪ ವಿಭಾಗ, ಮೈಸೂರು.	ರೂ. 13,54,996	-ಡಿಟೋ-
96.	ಇ.ಡಿ. ಪ್ರಸಾದ್, ಕ್ಲಾಸ್-4 ಎಂಪ್ಲಾಯ್, ಎಲೆಕ್ಟ್ರಿಕಲ್ ಅಟೆಂಡರ್ ಪಿ.ಡಬ್ಲ್ಯೂ.ಡಿ. ಬಿಲ್ಡಿಂಗ್, ಡಿವಿಷನ್-2, ಜಲದರ್ಶಿನಿ, ಅತಿಥಿ ಗೃಹ, ಮೈಸೂರು.	ರೂ. 11,26,328	-ಡಿಟೋ-
97.	ಕೆ.ಆರ್. ಕೃಷ್ಣೇಗೌಡ. ರೇಂಜ್ ಫಾರೆಸ್ಟ್ ಆಫೀಸರ್, ಆಲೂರ್ ರೇಂಜ್, ಹಾಸನ ಜಿಲ್ಲೆ.	ರೂ. 22,04,656	ತನಿಖೆಯ ಹಂತದಲ್ಲಿದೆ.
98.	ಎನ್. ಲಕ್ಷ್ಮಿನರಸಿಂಹ. ಗ್ರಾಮ ಲೆಕ್ಕಾಧಿಕಾರಿ, ಚಿಕ್ಕಹಳ್ಳಿ, ವರುಣ ಹೋಬಳಿ, ಮೈಸೂರು ತಾಲ್ಲೂಕು.	ರೂ. 22,48,890-00	ಅಮಾನತ್ತಿಗೆ ಶಿಫಾರಸ್ಸು ಮಾಡಲಾಗಿದೆ. ತನಿಖೆಯ ಹಂತದಲ್ಲಿದೆ.

1	2	3	4
99.	ಎ.ಎಸ್. ದೇವಪ್ಪ, ಎ.ಇ, ಮೆಕಾನಿಕಲ್ ಉಪ ವಿಭಾಗ, ಪಿ.ಹೆಚ್. ಇ. ಇಲಾಖೆ, ಶಿವಮೊಗ್ಗ.	ರೂ. 2,85,570-00	ನ್ಯಾಯಾಲಯದಲ್ಲಿ ವಿಚಾರಣೆ ಬಾಕಿ ಇದೆ.
100.	ಎಂ.ಎಸ್. ಚನ್ನಪ್ಪಗೌಡ, ಆಯುಕ್ತರು ಶಿವಮೊಗ್ಗ-ಅಭಿವೃದ್ಧಿ ಪ್ರಾಧಿಕಾರ, ಶಿವಮೊಗ್ಗ.	ರೂ. 3,27,149-00	'ಬಿ' ಅಂತಿಮ ವರದಿಯನ್ನು (ಎಕ್ಸೈಸ್ ಇನ್‌ಕಂ) ಸಲ್ಲಿಸಲಾಗಿದೆ.
101.	ಟಿ.ಕೆ. ಬ್ಯಾಡಗಿ, ಬ್ಲಾಕ್ ಡೆವಲಪ್‌ಮೆಂಟ್ ಆಫೀಸ್, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.	ರೂ. 9,35,700-00	ತನಿಖೆಯ ಹಂತದಲ್ಲಿರುತ್ತದೆ.
102.	ಜೆ. ಸಿದ್ದಲಿಂಗಯ್ಯ, ಜ್ಯೂನಿಯರ್ ಇಂಜಿನಿಯರ್, ಕೆ.ಇ.ಬಿ. ಹೊಳಲಿ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.	ರೂ. 3,08,095-00	-"-
103.	ಎಲ್. ರಮಾ ನಾಯಕ್, ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಬಳ್ಳಾರಿ.	ರೂ. 40,40,055-00	-"-

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ 103 ಅಧಿಕಾರಿಗಳ ಮನೆ ಮೇಲೆ ಲೋಕಾಯುಕ್ತ ದಾಳಿ ಮಾಡಿದ್ದಾರೆಂದು ವಿವರಗಳನ್ನು ಕೊಟ್ಟಿದ್ದಾರೆ. ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಬೇಕು, ಭ್ರಷ್ಟಾಚಾರವನ್ನು ತಡೆಗಟ್ಟಬೇಕು ಎಂದು ಸರ್ಕಾರದ ಇಚ್ಛಾಶಕ್ತಿಯೇನಿದೆ ಅದಕ್ಕೆ ಇದು ಹಿಡಿದಿರುವ ಕೈಗನ್ನಡಿಯೇ ಎಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಬಯಸುತ್ತೇನೆ. ಏಕೆಂದರೆ, 103 ಪ್ರಕರಣಗಳೆಂದು ತಾವು ಹೇಳಿದ್ದೀರಿ. ಅದರಲ್ಲಿ 73 ಇನ್ನು ತನಿಖೆಯ ಹಂತದಲ್ಲಿದೆ, 10ರಲ್ಲಿ ಮಾತ್ರ 'ಬಿ' ರಿಪೋರ್ಟ್ ಕೊಟ್ಟಿದ್ದಾರೆ, 6 ರಲ್ಲಿ ಮಾತ್ರ ಚಾರ್ಜ್‌ಶೀಟ್ ಹಾಕಿದ್ದಾರೆ, 13ರಲ್ಲಿ ಮಾತ್ರ ಅಮಾನತ್ತಿಗೆ ಶಿಪಾರಸ್ಸು ಮಾಡಲಾಗಿದೆ. 3 ಪ್ರಕರಣದಲ್ಲಿ ಮಾತ್ರ ಅಮಾನತ್ತು ಮಾಡಲಾಗಿದೆ. 11 ಪ್ರಕರಣಗಳು ನ್ಯಾಯಾಲಯದ ಮುಂದಿದೆ. ಲೋಕಾಯುಕ್ತ ಎಂಬುದು is it not a farce? ಲೋಕಾಯುಕ್ತದಿಂದ ಭ್ರಷ್ಟಾಚಾರದ ಮೇಲೆ ನಿಜವಾಗಿಯೂ ಅಂಕುಶವನ್ನು ಇಡಲು ಸಾಧ್ಯವಾಗುತ್ತಿದೆಯೇ? ಆ ಭ್ರಷ್ಟಾಚಾರಿಗಳನ್ನು ನಿಯಂತ್ರಣ ಮಾಡಲು ಆಗುತ್ತಿದೆಯೇ? ಇಲ್ಲದಿದ್ದರೆ ತಾವು ಆ ಲೋಕಾಯುಕ್ತವನ್ನು ಅಬಾಲಿಶ್ ಮಾಡಿಬಿಡಿ abolish this Lok Ayuktha or give teeth to this Lok Ayuktha Act and send message from this House.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿಯನ್ನು ಅರ್ಥಮಾಡಿಕೊಳ್ಳಬಲ್ಲೆ ಮತ್ತು ಅದನ್ನು ಗೌರವಿಸುತ್ತೇನೆ. 1994ರಲ್ಲಿ 25, 1995ರಲ್ಲಿ 15, 1996 ರಲ್ಲಿ 10 ಈ ರೀತಿ ಪ್ರಕರಣಗಳ ಸಂಖ್ಯೆಯನ್ನು ಹೇಳಿಕೊಂಡು ಬಂದಿದ್ದೇವೆ. ಆದರೆ ಈ ಸರ್ಕಾರ ಬಂದಮೇಲೆ ಜನವರಿ ತಿಂಗಳವರೆಗೆ 16 ಪ್ರಕರಣಗಳಲ್ಲಿ ಲೋಕಾಯುಕ್ತ ಕಾರ್ಯಾಚರಣೆ ಮಾಡಿರತಕ್ಕದ್ದು. ಆದ್ದರಿಂದ ಈ ಸಂಖ್ಯೆಗಳನ್ನು ಗಮನಿಸಿದಾಗ there is a progressive increase. ಎನ್ನತಕ್ಕದ್ದು ಮನನವಾಗುತ್ತದೆ. ಎರಡನೆಯದಾಗಿ ಎಷ್ಟು ಪ್ರಕರಣಗಳಲ್ಲಿ 'ಬಿ' ವರದಿ ಕೊಟ್ಟಿದ್ದಾರೆ, ಎಷ್ಟು ಪ್ರಕರಣಗಳಲ್ಲಿ ಕ್ರಮ ತೆಗೆದುಕೊಂಡಿದ್ದಾರೆ ಎಂಬುದು ಲೋಕಾಯುಕ್ತದವರಿಗೆ ಸಂಬಂಧಪಟ್ಟ ವಿಚಾರ. ವಿಚಾರಣೆ ಮಾಡತಕ್ಕವರು ಲೋಕಾಯುಕ್ತದ ಅಧಿಕಾರಿಗಳು. ಇದರ ಮೇಲೆ ಸರ್ಕಾರಕ್ಕೆ ಪ್ರತ್ಯಕ್ಷವಾದ ಮತ್ತು ಪರೋಕ್ಷವಾದ ಹಿಡಿತ ಇಲ್ಲ, ನಿಯಂತ್ರಣ ಇಲ್ಲ ಎಂಬುದನ್ನು ಸಹ ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಜೊತೆಗೆ Pending trial before the Court. ಕೋರ್ಟ್‌ಗಳ ಮೇಲೂ ಸಹ ಅವರು ಎಷ್ಟು ಅಡ್‌ಜರ್ನ್‌ಮೆಂಟ್‌ಗಳನ್ನು ಕೊಡಬೇಕು, ಎಷ್ಟು ಕೊಡಬಾರದು ಎಂದು ಸಹ ಸರ್ಕಾರಕ್ಕೆ ಯಾವುದೇ ಅಧಿಕಾರ ಇಲ್ಲ. ಮೊನ್ನೆ ಯಾವುದೊ ಒಂದು ಭಾಗದಲ್ಲಿ ಸೆಕ್ಷನ್ 144ನ್ನು ಜಾರಿ ಮಾಡಬೇಡಿ ಎಂದು ಕೋರ್ಟ್‌ನವರು ಆದೇಶ ಹೊರಡಿಸಿರುವುದನ್ನು ನೋಡಿದೆ. ಕೋರ್ಟ್‌ಗಳು ಯಾವ ಸೆಕ್ಷನನ್ನು ಜಾರಿ ಮಾಡಬೇಕು, ಯಾವುದನ್ನು ಜಾರಿ ಮಾಡಬಾರದು ಎಂಬುದನ್ನು ಹೇಳಲು ಪ್ರಾರಂಭ ಮಾಡಿದರೆ ನಾವು ಕಾನೂನು ವ್ಯವಸ್ಥೆಯನ್ನು ಹೇಗೆ ಕಾಪಾಡಬೇಕೊ ನನಗೆ ಅರ್ಥವಾಗುತ್ತಿಲ್ಲ. ಇದನ್ನು ಒಂದು ಉದಾಹರಣೆಯಾಗಿ ಹೇಳುತ್ತಿದ್ದೇನೆ. ಆದ್ದರಿಂದ ಕೋರ್ಟ್‌ಗಳು ಹೇಗೆ ನಡೆಯುತ್ತವೆ ಎಂಬ ಬಗ್ಗೆ ಸಹ ನಮ್ಮ ನೇರವಾದ ಹತೋಟಿ ಇಲ್ಲ. ಆದರೆ ಸರ್ಕಾರದ ನೀತಿ ಏನು ಎಂದರೆ ಭ್ರಷ್ಟಾಚಾರವನ್ನು ನಿಯಂತ್ರಣ ಮಾಡಬೇಕು, ಅದಕ್ಕೆ ಮಾನ್ಯ ಸದಸ್ಯರು ಏನೆಲ್ಲಾ ಕಾರ್ಯಕ್ರಮವನ್ನು ರಚನಾತ್ಮಕವಾಗಿ ಸಲಹೆ ಮಾಡುತ್ತಾರೊ ಅವೆಲ್ಲವನ್ನು ಬಹಳ ಗಂಭೀರದಿಂದ ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಅಧ್ಯಕ್ಷರೆ, ಎಷ್ಟು ಅಧಿಕಾರಿಗಳು ತಮ್ಮ ಈ ಐದು ತಿಂಗಳ ಅವಧಿಯಲ್ಲಿ ದಾಳಿಗೆ ಒಳಗಾಗಿ ವರದಿಯಾಗದಿರುವ ಬಗ್ಗೆ ಮಾಹಿತಿ ಕೊಡಿ. ಈ ಪಟ್ಟಿಯಲ್ಲಿ ಇಲ್ಲದಿರುವವರ ಬಗ್ಗೆ ಮಾಹಿತಿ ಕೊಡಿ.

ಅಧ್ಯಕ್ಷರು : ಅಪ್ ಟು ಡೇಟ್ ಎಷ್ಟಿದೆಯೆಂದು ಬೇರೆ ಪ್ರಶ್ನೆ ಕಳಿಸಿಕೊಡಿ ಅವರು ಉತ್ತರ ಹೇಳುತ್ತಾರೆ. ಅವರು ಇದರ ಬಗ್ಗೆ ಸಾಕಷ್ಟು ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಈ ಸರ್ಕಾರ ಅಧಿಕಾರಕ್ಕೆ ಬಂದ ಕಳೆದ ಐದು ತಿಂಗಳುಗಳಲ್ಲಿ 18-19 ಕೇಸ್‌ಗಳು ರಿಪೋರ್ಟ್ ಆಗಿವೆ ಎಂದು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರ ಬದಲಾವಣೆಯಾಗುವುದಕ್ಕೂ, ಲೋಕಾಯುಕ್ತದವರು ಈ ತರಹ ರೈಡ್‌ಗಳನ್ನು ಮಾಡುವುದಕ್ಕೂ ಏನಾದರೂ ಸಂಬಂಧ ಇದೆಯೇ? ಲೋಕಾಯುಕ್ತ ಒಂದು ಸ್ವಾಯತ್ತ, ಪರಮಾಧಿಕಾರ ಇರುವಂತಹ ಒಂದು ಸಂಸ್ಥೆ. ಅದಕ್ಕೂ ಸರ್ಕಾರ ಬದಲಾವಣೆ ಆಗುವುದಕ್ಕೂ ಏನೂ ಸಂಬಂಧವಿರುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಎರಡನೆಯದಾಗಿ, ಮಾನ್ಯ ಮುಖ್ಯಮಂತ್ರಿಯವರು ಲೋಕಾಯುಕ್ತದವರು 'ಬಿ' ರಿಪೋರ್ಟ್‌ಗಳನ್ನು ಕೊಡುತ್ತಾರೆ, ಅದರ ಮೇಲೆ ಸರ್ಕಾರದ ಹಿಡಿತವಿಲ್ಲ ಎಂಬ ಮಾತನ್ನು ಹೇಳಿದರು. ಆ ಮಾತನ್ನು ನಾನೂ ಕೂಡ ಒಪ್ಪುತ್ತೇನೆ. ಆದರೆ ಅಮಾನತ್ತು ಇಟ್ಟು ಸಂಬಂಧಪಟ್ಟ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳತಕ್ಕ ಅಧಿಕಾರ ಸರ್ಕಾರಕ್ಕಿರುವುದಿಲ್ಲವೇ? ಇಲ್ಲಿ ಕೆಲವು ಅಧಿಕಾರಿಗಳು ಅಮಾನತ್ತು ಆಗಿದ್ದರೆ, ಇನ್ನು ಕೆಲವು ಅಧಿಕಾರಿಗಳು ಅಮಾನತ್ತು ಆಗಿರುವುದಿಲ್ಲ. ಸಂಬಂಧಪಟ್ಟ ಅಧಿಕಾರಿಯನ್ನು ಅಮಾನತ್ತು ಮಾಡಲು ಸರ್ಕಾರಕ್ಕೆ ಲೋಕಾಯುಕ್ತರ ಶಿಫಾರಸ್ಸೂ ಕೂಡ ಬೇಕಾಗಿಲ್ಲ. ನಾನು ಸರ್ಕಾರದಲ್ಲಿ ಇದ್ದಾಗ ಪತ್ರಿಕೆಯೊಂದರಲ್ಲಿ ಬಂದ ವರದಿಯ ಆಧಾರದ ಮೇಲೆಯೇ ಸಂಬಂಧಪಟ್ಟವರನ್ನು ಅಮಾನತ್ತಿನಲ್ಲಿಟ್ಟ ಉದಾಹರಣೆಯನ್ನು ತಾವು ಕಡತದಲ್ಲಿ ನೋಡಬಹುದಾಗಿದೆ. ಭ್ರಷ್ಟಾಚಾರದ ಮೇಲೆ ಗಧಾಪ್ರಹಾರ ಮಾಡಬೇಕೆಂಬ ದೃಢ ಸಂಕಲ್ಪ ಈ ಸರ್ಕಾರಕ್ಕಿದ್ದರೆ ಪತ್ರಿಕೆಯಲ್ಲಿ ಬಂದಿರುವ ವರದಿಯ ಆಧಾರದ ಮೇಲೆಯೇ ಅಧಿಕಾರಿಗಳನ್ನು ಅಮಾನತ್ತಿನಲ್ಲಿ ಇಡಬೇಕು. ಕೆಲವು ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟು, ಇನ್ನು ಕೆಲವು ಅಧಿಕಾರಿಗಳನ್ನು ಅಮಾನತ್ತಿನಲ್ಲಿಡದೇ ಇರುವ ತಾರತಮ್ಯ ನೀತಿಯನ್ನು ಈ ಸರ್ಕಾರ ಏಕೆ ಅನುಸರಿಸುತ್ತಿದೆ? ಅದನ್ನು ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕು. ನಮ್ಮ ಸರ್ಕಾರ ಇದ್ದಾಗ ನಾವು ಲೋಕಾಯುಕ್ತದಿಂದ ಏನು ರಿಪೋರ್ಟ್‌ಗಳು ಬರುತ್ತಿದ್ದವೋ, ಅವುಗಳನ್ನೆಲ್ಲವನ್ನೂ ಚಾಚೂ ತಪ್ಪದೇ ಒಪ್ಪಿಕೊಂಡಿರತಕ್ಕಂತಹ ನಿದರ್ಶನಗಳು ಅನೇಕ ಇರುವುದನ್ನು ನೀವು ನೋಡಬಹುದು. ಇದರ ಬಗ್ಗೆ ತಮ್ಮ ಸರ್ಕಾರದ ನೀತಿಯೇನು? ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ಮಾನ್ಯ ಬೈರೇಗೌಡರು ಬಹಳ ಮುಖ್ಯವಾದ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದಾರೆ. ಆದುದರಿಂದ ಅದಕ್ಕೆ ಉತ್ತರಿಸುವುದಕ್ಕೆ ಪ್ರಯತ್ನಿಸುವುದು ನನ್ನ ಕರ್ತವ್ಯ. ಸ್ಪಷ್ಟವಾಗಿ ನಾನು ಈ ಸದನದಲ್ಲಿ ದೃಢೀಕರಿಸುವುದೇನೆಂದರೆ, ಲೋಕಾಯುಕ್ತದವರು

ಮಾಡತಕ್ಕಂತಹ ರೈಡ್‌ಗಳಿಗೂ ಸರ್ಕಾರಕ್ಕೂ ಯಾವುದೇ ಸಂಬಂಧ ಇಲ್ಲ. ಮಾನ್ಯ ಮುಖ್ಯಮಂತ್ರಿ -ಗಳನ್ನಾಗಲೀ, ರಾಜ್ಯ ಸರ್ಕಾರವನ್ನಾಗಲೀ ಲೋಕಾಯುಕ್ತದವರು ರೈಡ್ ಮಾಡುವಾಗ ಕನ್‌ಸಲ್ಟ್ ಮಾಡಬೇಕಾದಂತಹ ಅವಶ್ಯಕತೆ ಇಲ್ಲ. ಅವರು ಕನ್‌ಸಲ್ಟ್ ಮಾಡುತ್ತಲೂ ಸಹ ಇಲ್ಲ. ಯಾವುದಾದರೂ ಅಧಿಕಾರಿ ಮನೆಯ ಮೇಲೆ ಲೋಕಾಯುಕ್ತದವರು ರೈಡ್ ಮಾಡಿದಾಗ ನೀವು ಹೇಗೆ ಪೇಪರ್ ಓದಿ ತಿಳಿದುಕೊಳ್ಳುತ್ತೀರೋ ಹಾಗೆಯೇ ನಾವೂ ಸಹಾ ತಿಳಿದುಕೊಳ್ಳುತ್ತೇವೆ ಅಥವಾ ಆ ಬಗ್ಗೆ ಲೋಕಾಯುಕ್ತದಿಂದ ಸರ್ಕಾರಕ್ಕೆ ವರದಿ ಬಂದ ಮೇಲೆ ನಮಗೆ ಗೊತ್ತಾಗುತ್ತದೆ. ಇದರ ಬಗ್ಗೆ ನಮಗೆ ಸ್ಪಷ್ಟತೆ ಇರಬೇಕು. ಮಾನ್ಯ ಮುಖ್ಯಮಂತ್ರಿಗಳು ಹೇಳಿ ರೈಡ್ ಮಾಡಿಸಿದರು ಎಂಬ ಗುಸುಗುಸು ಮಾತುಗಳು ಅಲ್ಲಲ್ಲಿ ಕೇಳಿ ಬರುತ್ತಿವೆ. ಲೋಕಾಯುಕ್ತಕ್ಕೆ ಸ್ಪೆಷಲ್ ಸ್ಟೇಟಸ್ ಮತ್ತು ಸ್ಪೆಷಲ್ ಆಟಾನಮಿಯನ್ನು ಸರ್ಕಾರ ನೀಡಿರುವ ಹಿಂದೆ ಬಹಳ ಅರ್ಥ ಇದೆ, ಸರ್ಕಾರ ಮಧ್ಯಪ್ರವೇಶ ಮಾಡಬಾರದು ಎಂಬ ಬಗ್ಗೆ ದೊಡ್ಡ ಸಂದೇಶ ಇದೆ. ಒಂದು ಕಾಲದಲ್ಲಿ ಆ್ಯಂಟಿ-ಕರಪ್ಶನ್ ಡಿಪಾರ್ಟ್‌ಮೆಂಟ್ ಮಾನ್ಯ ಮುಖ್ಯಮಂತ್ರಿಗಳ ಅಥವಾ ಗೃಹ ಮಂತ್ರಿಗಳ ಕೈಕೆಳಗೇ ಇರುತ್ತಿತ್ತು, ಆಗ ನಾವು ಸಿಂಧ್ಯಾರವರ ಮನೆ ರೈಡ್ ಮಾಡಿ ಅಥವಾ ಮತ್ತೊಬ್ಬರ ಮನೆ ರೈಡ್ ಮಾಡಿ ಎಂದು ಹೇಳಬಹುದಾಗಿತ್ತು. ಆದರೆ ಈಗ ಆ ಕಾಲ ಹೋಯಿತು. ಈಗ ಲೋಕಾಯುಕ್ತ ಎಂಬುದು ಒಂದು ಪೂರ್ಣವಾದ ಅಧಿಕಾರ ಇರುವಂತಹ ಒಂದು ಸ್ವಾಯತ್ತ ಸಂಸ್ಥೆಯಾಗಿದೆ. ನಾವು ಅಧಿಕಾರಕ್ಕೆ ಬಂದ ಮೇಲೆಯೇ ಲೋಕಾಯುಕ್ತದವರ ದಾಳಿಗಳು ಜಾಸ್ತಿಯಾಗುತ್ತಿರುವುದು ಕೇವಲ ಕಾಕತಾಳೀಯವೇ ಹೊರತು, ಅದಕ್ಕೆ ಸರ್ಕಾರ ಕಾರಣರು ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. ಲೋಕಾಯುಕ್ತದವರು ಎಷ್ಟೋ ಕೇಸ್‌ಗಳಲ್ಲಿ 'ಬಿ' ರಿಪೋರ್ಟ್‌ಗಳನ್ನು ಹಾಕುತ್ತಾರೆ. ಲೋಕಾಯುಕ್ತದವರು ಅಧಿಕಾರಿ ಘೋಷಿಸಿರುವ ಆಸ್ತಿ-ಪಾಸ್ತಿಗಳ ಆಧಾರದ ಮೇಲೆ, ತಮಗೆ ಬಂದಿರುವ ಮಾಹಿತಿಗಳ ಆಧಾರದ ಮೇಲೆ ದಾಳಿಗಳನ್ನು ಮಾಡುತ್ತಾರೆ. ಲೋಕಾಯುಕ್ತದವರು ಅಧಿಕಾರಿಯ ಮನೆಯ ದಾಳಿ ಮಾಡಿದ ತಕ್ಷಣ, ಆ ಬಗ್ಗೆ ಪೇಪರ್‌ನಲ್ಲಿ ಬಂದ ತಕ್ಷಣ, ಸರ್ಕಾರದವರು ಆ ಅಧಿಕಾರಿಯನ್ನು ಅಮಾನತ್ತಿನಲ್ಲಿಟ್ಟು, ನಂತರ ಸದರಿ ಪ್ರಕರಣದ ಬಗ್ಗೆ ಲೋಕಾಯುಕ್ತದವರು 'ಬಿ' ರಿಪೋರ್ಟ್ ಅನ್ನು ಸಲ್ಲಿಸಿದಾಗ, ಸದರಿ ಅಮಾನತ್ತನ್ನು ವಾಪಸ್ ತೆಗೆದುಕೊಂಡರೆ ಬಹಳ ದೊಡ್ಡ ಅಪಚಾರವನ್ನು ಆ ಅಧಿಕಾರಿಗೆ ಮಾಡುತ್ತಿದ್ದೇವೆ ಎಂಬುದು ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾಗಿರತಕ್ಕಂತಹ ವಿಚಾರ. ನಾವು ಅಮಾನತ್ತು ಮಾಡಿದ ಅಧಿಕಾರಿಗಳಿಗೆ 75ರಷ್ಟು ಭಾಗ ಸಂಬಳವನ್ನು ಕೊಡುತ್ತೇವೆ. ಆದುದರಿಂದ ನಮ್ಮ ಆಲೋಚನೆಗಳು ಯಾವ ರೀತಿಯಲ್ಲಿ ಇರಬೇಕು ಯಾವ ಅಧಿಕಾರಿಯ ಮನೆ ಮೇಲೆ ದಾಳಿಯಾಗುತ್ತದೆಯೋ ಆ ಅಧಿಕಾರಿ ಯಾವ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದಾನೋ ಅವನನ್ನು ಅಲ್ಲಿಂದ ವರ್ಗಾವಣೆ ಮಾಡಿ ಅವನು ಸಾಕ್ಷಿ ಟ್ಯಾಂಪರ್ ಮಾಡದಂತಹ ರೀತಿಯಲ್ಲಿ ನೋಡಿಕೊಳ್ಳಬೇಕೇ ಅಥವಾ ಕೇಸ್‌ಗಳು ಕೋರ್ಟ್‌ನಲ್ಲಿ ದಾಖಲಾಗಿ, ಸದರಿ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಗಳು ಸರ್ಕಾರಕ್ಕೆ ಬಂದ ಮೇಲೆಯೇ ನಾವು ಆ ಅಧಿಕಾರಿಯನ್ನು ಅಮಾನತ್ತಿನಲ್ಲಿಡಬೇಕೇ, ಬೇಡವೇ ಎಂಬ ಬಗ್ಗೆ ನೋಡಬೇಕೇ ಎಂಬ ವಿಚಾರವಾಗಿ ನಾನು ವಿರೋಧ ಪಕ್ಷದ ಸದಸ್ಯರುಗಳ ಸಲಹೆಗಳನ್ನು ಕೇಳಲಿಕ್ಕೆ ಸಿದ್ಧವಾಗಿದ್ದೇನೆ. ಇದರ ಬಗ್ಗೆ ನಾನು ಲೋಕಾಯುಕ್ತದವರನ್ನು ಈ ವಿಚಾರದಲ್ಲಿ

ಅವರ ಕಾರ್ಯಸೂಜಿ ಏನು? ಅವರ ಅನುಭವದ ಆಧಾರದ ಮೇಲೆ ಸರ್ಕಾರ ಏನು ಮಾಡಬಹುದು ಎಂಬ ಬಗ್ಗೆ ಔಪಚಾರಿಕವಾಗಿ ಅವರನ್ನು ನಾನು ಭೇಟಿ ಮಾಡಲಿಕ್ಕೆ ಯೋಚನೆ ಮಾಡುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಚನ್ನಕೇಶವ, ಎಗ್ಸಿಕ್ಯೂಟೀವ್ ಇಂಜಿನಿಯರ್, ಮೈಸೂರು ಸಿಟಿ ಕಾರ್ಪೊರೇಷನ್ ಇವರನ್ನು ಅಮಾನತ್ತು ಮಾಡಬೇಕೆಂದು ಸರ್ಕಾರಕ್ಕೆ ಲೋಕಾಯುಕ್ತದವರು ಶಿಫಾರಸ್ಸು ಮಾಡಿದ್ದಾರೆ. ಆದರೆ ಅದು ಆ ಹಂತದಲ್ಲೇ ಇದೆ. ಲೋಕಾಯುಕ್ತದಿಂದ ಶಿಫಾರಸ್ಸು ಬಂದ ಮೇಲೆಯೇ ಅಮಾನತ್ತು ಮಾಡಬೇಕೆಂಬುದೇನೂ ಇಲ್ಲ. ಒಂದು ವೇಳೆ ಲೋಕಾಯುಕ್ತದವರು 'ಬಿ' ರಿಪೋರ್ಟ್ ಕೊಟ್ಟರೆ, ಆ ಅಮಾನತ್ತನ್ನು ತೆರವು ಮಾಡುವುದರಲ್ಲಿ ತಪ್ಪೇನೂ ಇಲ್ಲ. ಅಮಾನತ್ತು ಮಾಡತಕ್ಕದ್ದು ಶಿಕ್ಷೆಯೇನೂ ಅಲ್ಲ. ಆದರೆ ಅಮಾನತ್ತು ಮಾಡುವುದರಿಂದ ಸಾರ್ವಜನಿಕರಲ್ಲಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂತಹ ಅಥಾರಿಟಿ ಈ ರಾಜ್ಯದಲ್ಲಿದೆ ಎಂಬ ನಂಬಿಕೆ ಬರುತ್ತದೆ. ಆ ಅಭಿಪ್ರಾಯವನ್ನು ಜನರಲ್ಲಿ ಮೂಡಿಸುವುದಕ್ಕೋಸ್ಕರ ತಕ್ಷಣವೇ ತಪ್ಪಿತಸ್ಥ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡಬೇಕೆಂದು ನಾನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ಚನ್ನಕೇಶವ ಎಂಬುವವರನ್ನು ಅಮಾನತ್ತಿನಲ್ಲಿಡಬೇಕೆಂದು ದಿನಾಂಕ 3.3.94ರಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಬಂದಿದೆ. ಕಳೆದ ಐದು ವರ್ಷಗಳ ಕಾಲ ಅಧಿಕಾರದಲ್ಲಿದ್ದವರು ಆ ಶಿಫಾರಸ್ಸನ್ನು ಜಾರಿಗೊಳಿಸಬಹುದಾಗಿತ್ತು ಎಂದು ಮಾತ್ರ ನಾನು ಹೇಳಬಯಸುತ್ತೇನೆ, ಅವರ ಮೇಲೆ ದೋಷಾರೋಪಣೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಚನ್ನಕೇಶವ ಎಂಬುವವರನ್ನು ಇದುವರೆಗೂ ಅಮಾನತ್ತು ಮಾಡದಿರುವ ವಿಚಾರದ ಬಗ್ಗೆ ಈಗ ತಾನೇ ಮಾನ್ಯ ಸದಸ್ಯರು ನನ್ನ ಗಮನ ಸೆಳೆದಿದ್ದಾರೆ. ನಾನು ಅದಕ್ಕೆ ಸಂಬಂಧಪಟ್ಟ ಫೈಲ್ ತರಿಸಿಕೊಂಡು ಏನಾಗಿದೆ ಎಂದು ತಿಳಿದುಕೊಂಡು ಅನಂತರ ಮಾನ್ಯ ಸದಸ್ಯರಿಗೆ ಆ ಬಗ್ಗೆ ತಿಳಿಸುತ್ತೇನೆ.

ಶ್ರೀ ವೈ.ಕೆ. ರಾಮಯ್ಯ (ಹುಲಿಯೂರು ದುರ್ಗ) : ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆಯೇ ಲೋಕಾಯುಕ್ತದವರ ರೈಡ್‌ಗಳು ಜಾಸ್ತಿಯಾಗಿವೆ ಎಂಬುದು ಕೇವಲ ಕಾಕತಾಳೀಯವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅದು ಕಾಕತಾಳೀಯವಾಗಿದ್ದರೂ ಕೂಡ ನಾನು ಆ ವಿಚಾರವಾಗಿ ವೈಯಕ್ತಿಕವಾಗಿ ಅದಕ್ಕೆ ಈ ಸರ್ಕಾರ ಕಾರಣವೋ ಅಲ್ಲವೋ, ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ, ಅದಕ್ಕಾಗಿ ಹೆಮ್ಮೆ ಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಂತಹ ಉತ್ತರದಿಂದ ಸಾರ್ವಜನಿಕರಲ್ಲಿ ಒಂದು ರೀತಿಯ ಅಪನಂಬಿಕೆ ಬರುತ್ತದೆ. ಲೋಕಾಯುಕ್ತದವರು ಸ್ವತಂತ್ರವಾಗಿ ಕಾರ್ಯ ನಿರ್ವಹಣೆ ಮಾಡಬೇಕಾದುದುದ ಅವಶ್ಯಕ ಮತ್ತು ಅನಿವಾರ್ಯ. ಅದು ನಾವೆಲ್ಲರೂ ಒಪ್ಪಬೇಕಾದ್ದೆ ಆದರೆ ಲೋಕಾಯುಕ್ತದಲ್ಲಿ ಕೆಲಸ ಮಾಡುವವರೆಲ್ಲಾ ಸರ್ವಜ್ಞರು ಅಥವಾ ಸರ್ವಗುಣ ಸಂಪನ್ನರು ಅಲ್ಲ. ಅಲ್ಲಿರುವವರೂ ಕೂಡ ಸರ್ವೇ ಸಾಮಾನ್ಯವಾದಂತಹ ಮನುಷ್ಯರು. ಅವರೂ ಕೂಡ ತಪ್ಪನ್ನು ಮಾಡುತ್ತಾರೆ. ನನಗೆ

ತಿಳಿದಿರುವ ಪ್ರಕರಣವೊಂದರಲ್ಲಿ 1994ರಲ್ಲಿ ರೈಡ್ ಮಾಡಿದ್ದರೂ ಕೂಡ ಇವತ್ತಿನವರೆಗೂ ಲೋಕಾಯುಕ್ತದಿಂದ ಆ ಬಗ್ಗೆ ಸರ್ಕಾರಕ್ಕೆ ವರದಿ ಬಂದಿಲ್ಲ. ಚಾರ್ಜ್‌ಶೀಟ್ ಕೂಡ ಹಾಕಿರುವುದಿಲ್ಲ. ಒಂದು ವೇಳೆ ನಾನೇ ಆ ಸಂಬಂಧಪಟ್ಟ ಅಧಿಕಾರಿ ಆಗಿದ್ದರೆ, ನನ್ನನ್ನು ಜೈಲಿಗೆ ಕಳುಹಿಸಿ ಇಲ್ಲವೇ ನನ್ನ ಮೇಲೆ ಚಾರ್ಜ್‌ಶೀಟ್ ಆದರೂ ಹಾಕಿ ಎಂದು ಅವರನ್ನು ಕೇಳುತ್ತಿದ್ದೆ. ಈ ಪ್ರಕರಣದಲ್ಲಿ ಅಧಿಕಾರಿ ಯಾರೋ ಮೆತ್ತಗಿರುವವರು ಅದಕ್ಕೆ ಅವರು ಆ ರೀತಿ ಲೋಕಾಯುಕ್ತದವರನ್ನು ಕೇಳಲು ಹೋಗಿಲ್ಲ. ಲೋಕಾಯುಕ್ತದವರಿಗೆ ಸ್ವಾತಂತ್ರ್ಯವನ್ನು ಕೊಟ್ಟಿರುವುದಕ್ಕಾಗಿ ನಾನು ಈ ಸರ್ಕಾರವನ್ನು ಅಭಿನಂದಿಸುತ್ತೇನೆ. ಆದರೆ ಅಲ್ಲಿರುವಂತಹ ಸರ್ವೇ ಸಾಮಾನ್ಯವಾದಂತಹ ಜನರು ಮಾಡುವಂತಹ ತಪ್ಪು ಒಪ್ಪುಗಳನ್ನು ಸರಿಮಾಡಿ ಅವರ ಮೇಲೆ ನಿಯಂತ್ರಣವನ್ನು ಮಾಡುವಂತಹ ಕೆಲಸವನ್ನು ಯಾರು ಮಾಡಬೇಕು ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನನಗೆ ಮತ್ತು ಈ ಸದನದ ಮೂಲಕ ರಾಜ್ಯದ ಜನತೆಗೆ ತಿಳಿಸಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೆ, ಮುಖ್ಯ ಮಂತ್ರಿಗಳು ಹೇಳಿದ್ದುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅಮಾನತ್ತಿನಲ್ಲಿದ್ದಂತಹ ಟೈಮ್‌ನಲ್ಲಿ ಟ್ಯಾಂಪರ್ ಮಾಡಬಾರದು ಎಂದು ಇದೆ. ಸಾಮಾನ್ಯ ನಾಗರೀಕರಿಗೆ ಪ್ರಶ್ನೆ ಇರುವುದು ಭ್ರಷ್ಟ ಅಧಿಕಾರಿಗಳು ಯಾರು ರೈಡ್ ಆಗುತ್ತಾರೆ, ಟ್ರಾಪ್ ಆಗುತ್ತಾರೆ, ಅವರಿಗೆ ನಾಚಿಕೆ ಇಲ್ಲ, ಭಯವೂ ಇಲ್ಲ. ಎನ್ನುವ ಸ್ಥಿತಿಗೆ ನಾಗರೀಕ ಬಂದಿದ್ದಾನೆ. ನಮ್ಮ ಮುಂದೆ ಒಂದು ಇದೆ, ನಾನು ಹೆಸರು ಹೇಳುವುದಿಲ್ಲ. ಈ ಲಿಸ್ಟ್‌ನಲ್ಲಿ ಆ ಮನುಷ್ಯನ ಹೆಸರು ಇದೆ. ಅವರ ಆಸ್ತಿ ಪ್ರಮಾಣ ಬಂದಿರುವುದು ಲೆಕ್ಕ ಹಾಕಿ. ಅವರ ಕಛೇರಿ ಮತ್ತು ನಿವಾಸದ ಮೇಲೆ ಏಕ ಕಾಲದಲ್ಲಿ ಲೋಕಾಯುಕ್ತದವರು ದಾಳಿ ನಡೆಸಿ ಕೋಟ್ಯಾಂತರ ರೂಪಾಯಿ ಆಸ್ತಿ ಪತ್ತೆ ಮಾಡಿದ್ದಾರೆ. ಹೊಸಕೋಟೆ ಹತ್ತಿರ ಈಜುಕೊಳ, ವಸತಿ ಸಂಕೀರ್ಣವನ್ನು ಒಳಗೊಂಡ 10 ಎಕರೆ ಪ್ರದೇಶದಲ್ಲಿರುವ ರಿಸಾರ್ಟ್‌ಗೆ ಈತ ಓನರ್. ಬಳ್ಳಾರಿ ರಸ್ತೆ ಹುಣಸೆ ಮಾರನಹಳ್ಳಿಯಲ್ಲಿರುವ ಎರಡು ಎಕರೆ ಜಮೀನು. ಹಲವಾರು ನಿವೇಶನಗಳು ಇವೆಲ್ಲಾ ಹೊಂದಿದ್ದು ಲೋಕಾಯುಕ್ತದವರು ಪತ್ತೆ ಮಾಡಿದ್ದಾರೆ.

(INTERRUPTIONS)

MR. SPEAKER : Please conclude. 20 ನಿಮಿಷ ಜಾಸ್ತಿಯಾಗಿದೆ, ಒಂದೊಂದೇ ವಿಷಯ ಹೇಳುತ್ತಿದ್ದರೆ ಹೇಗೆ?

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, I am not attributing anything... ಸಾಮಾನ್ಯ ಜನರಿಗೆ ಏನನ್ನಿಸುತ್ತದೆ, ಈಗ ಸಭೆಯಲ್ಲಿ ನನಗೆ ಏನಾಗುತ್ತದೆ, ಅದೇ ಕೆಲಸ ಲೋಕಾಯುಕ್ತದ ಅಧಿಕಾರಿಗಳಿಗೆ ಆಗುತ್ತಿದೆ. ಅದೇ ಅಡ್ಡಿ ಆತಂಕ ಲೋಕಾಯುಕ್ತದ ಅಧಿಕಾರಿಗಳಿಗೆ ಆಗುತ್ತಿದೆ. Why these cases are not being followed? ಆ್ಯಕ್ಷನ್ ತೆಗೆದುಕೊಳ್ಳುತ್ತಿಲ್ಲ. ಏಕೆ ಅಡ್ಡಿ ಮಾಡಬೇಕು? It is my right to speak.

MR. SPEAKER : One at a time. ಪ್ರಶ್ನೆ ಕೇಳಬೇಕು, ಉತ್ತರ ತೆಗೆದುಕೊಳ್ಳಬೇಕು. 3-4 ಪ್ರಶ್ನೆ ಒಂದೇ ಸಾರಿ ಕೇಳಿದರೆ ಹೇಗೆ?

ಶ್ರೀ ಎಸ್. ಸುರೇಶ್ ಕುಮಾರ್ : ಸಾಮಾನ್ಯ ಜನರಿಗೆ ಇಂತಹ ಸಂಶಯ ಬರುತ್ತಿದೆ. ತಮ್ಮ ಮುಖಾಂತರ ನಾನು ಮುಖ್ಯ ಮಂತ್ರಿಯವರ ಗಮನಕ್ಕೆ ತರುವುದಕ್ಕೆ ಇಷ್ಟ ಪಡುವುದೇನೆಂದರೆ, ಸಾಮಾನ್ಯ ಜನರಿಗೆ ಇಂತಹ ಸಂಶಯಕ್ಕೆ ಎಡೆ ಮಾಡಿಕೊಟ್ಟ ಹಾಗಾಗುತ್ತದೆ. ಅವರ ಮನೆಯಲ್ಲಿ ಜರ್ಮನ್ ಶಫರ್ಡ್ ತಳಿ ನಾಯಿ ಇದ್ದು, ಅದರ ನಿರ್ವಹಣೆಗೆ ಪ್ರತಿ ತಿಂಗಳು ಸಾವಿರಾರು ರೂಪಾಯಿ ಖರ್ಚು ಬರುತ್ತದೆ. ರೈಡ್ ಆಗುತ್ತದೆ. ರೈಡ್ ಆದ ವಿಚಾರ ಪೇಪರ್‌ನಲ್ಲಿ ಬರುತ್ತದೆ. That Officer is happily continuing in the same post ಆ್ಯಕ್ಷನ್ ಇಲ್ಲ, ಅದಕ್ಕೆ ನಾನು ಹೇಳುತ್ತಿರುವುದು, ರಾಜ್ಯದಲ್ಲಿರುವ ಅಧಿಕಾರಿಗಳಿಗೆ ಒಂದು ಭಯ ಇರಬೇಕು, ಇಲ್ಲದಿದ್ದರೆ ರೈಡ್ ಆಯಿತು ಎಂದು ನಾಚಿಕೆಯಾದರೂ ಇರಬೇಕು. ಸರ್ಕಾರ ಇವರ ಸರ್ಕಾರ ಅಲ್ಲ, ಅವರ ಸರ್ಕಾರ ಅಲ್ಲ. It is a continuing process.

ಅಧ್ಯಕ್ಷರು : ಕ್ವೆಶ್ಚನ್ ಕೇಳಿ, ಉತ್ತರ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದೇ ಒಂದು ಪ್ರಶ್ನೆ ಕೇಳುತ್ತೇನೆ. ಗಾಂಧೀಜಿಯವರ ಒಂದು ಹೇಳಿಕೆ ಇದೆ. Hate the sin, not the sinner. Are we hating corruption and loving corrupt people?

(INTERRUPTION)

ಅಧ್ಯಕ್ಷರು : ಬಚ್ಚೇಗೌಡರೇ ತಾವು ಮಧ್ಯೆ ಪ್ರವೇಶಿಸಿ ಹೇಳಿದ್ದೀರಿ.

ಶ್ರೀ ಎಸ್. ಎಂ. ಕೃಷ್ಣ : ಗಂಭೀರವಾದ ವಿಚಾರಗಳು ಎಲ್ಲವನ್ನೂ ಕೂಡ ನಾವು ಯಾವ ಚೌಕಟ್ಟಿನಲ್ಲಿ ಸರ್ಕಾರಿ ಅಧಿಕಾರಿಗಳ ಮೇಲೆ ಕ್ರಮ ಮುಂದುವರೆಸಬೇಕು ಎನ್ನುವುದರ ಬಗ್ಗೆ ಒಂದು ವಿಶಾಲವಾದ ಕಾನ್‌ಸೆನ್‌ಸಸ್ ಎಮರ್ಜ್ ಆಗಬೇಕಾಗಿರುವುದು ಬಹಳ ಅವಶ್ಯಕವಾಗಿದೆ. ಸರ್ಕಾರಗಳು ಬರುತ್ತವೆ, ಹೋಗುತ್ತವೆ. ಆದರೆ ಭ್ರಷ್ಟಾಚಾರದ ವಿಚಾರ ಮಾತ್ರ ಅನವರತವಾಗಿ ಮುಂದುವರೆಯಬೇಕೆಂದು ನನ್ನ ಇಷ್ಟ. ಗಾಂಧೀಜಿಯವರ ಕೋಟ್ ತಾವು ಹೇಳಿದಿರಿ. I also hate corruption as much as all the members in this House. Hate corruption. But in order to contain corruption at all levels, unless there is a consensus in the House in a confrontationist manner, we cannot contain corruption. In the House if we have to contain that is the general desire of this House. I respect that desire. ನಾವು ಅಧಿಕಾರಿಗಳ ಮೇಲೆ ಏನು ಕ್ರಮ ಮುಂದುವರೆಸಬೇಕೆಂದು ತಾವು ಒಬ್ಬ ಅಧಿಕಾರಿಯ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ, ಪೇಪರ್‌ನಲ್ಲಿ ಬಂದಿರತಕ್ಕಂತಹ ವಿಚಾರವನ್ನು ಸಭೆಯ ಗಮನಕ್ಕೆ ತಂದಿದ್ದೀರಿ, ಈ ಆಧಾರದ ಮೇಲೆ ನನಗೆ ಕೆಲವು ದಿವಸ ಅವಕಾಶ ಕೊಟ್ಟರೆ ನಾನು ಲೋಕಾಯುಕ್ತದವರಿಗೆ ಭೇಟಿ ಮಾಡಿ ಇದರ ಬಗ್ಗೆ ಗೈಡ್‌ಲೈನ್ಸ್ ಸೃಷ್ಟಿ ಮಾಡಿ ಆ ಗೈಡ್ ಲೈನ್ಸ್ ಒಳಗೆ ಕ್ರಮ ಮುಂದುವರೆಸುತ್ತೇವೆಂದು ಆಶ್ವಾಸನೆ ಕೊಡುತ್ತೇವೆ.